ಕರ್ನಾಟಕ ವಿಧಾನಸಭೆ

ಮಂಗಳವಾರ 25ನೇ ಜನವರಿ 2005 ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ ರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಕುರಿತು.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಸ ಧ್ಯಕ್ಷರೆ, ಅಖಂಡ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಸಮಗ್ರ ನೀರಾವರಿ ಯೋಜನೆಯ ವ್ಯಾಪ್ತಿಗೊಳಪಡಬೇಕೆಂದು ಆಗ್ರಹಿಸಿ ಆ ಜಿಲ್ಲೆಗಳ ರೈತರೆಲ್ಲರೂ ಸೇರಿಕೊಂಡು ಪಾದಯಾತ್ರೆ ಪ್ರಾರಂಭಿಸಿದ್ದಾರೆ.

ಅಧ್ಯಕ್ಷರು : ತಾವು ಏನೇ ಮಾತನಾಡಬೇಕಾದರೂ ಪ್ರಶ್ನೋತ್ತರವಾದ ಬಳಿಕವೇ ಪ್ರಸ್ತಾಪಿಸಬೇಕು. ಈ ಸದನದ ನಿಯಮಾವಳಿ ರೀತ್ಯ ತಾವು ನಡೆದುಕೊಳ್ಳಬೇಕು. ಸದನ ಪ್ರಾರಂಭವಾದ ತಕ್ಷಣ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಈ ಬಗ್ಗೆ ನಿನ್ನೆಯೇ ತಮ್ಮಲ್ಲಿ ಮನವಿ ಮಾಡಿದ್ದೇನೆ.

ಅಧ್ಯಕ್ಷರು : ನಿಯಮಾವಳಿ ರೀತ್ಯ ಸದನ ನಡೆಯಬೇಕಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಆ ಭಾಗದ ಜಿಲ್ಲೆಗಳು ಸಮಗ್ರ ನೀರಾವರಿ ಯೋಜನೆಯ ವ್ಯಾಪ್ತಿಗೊಳಪಡಬೇಕೆಂದು ರೈತರೆಲ್ಲರೂ ಸೇರಿಕೊಂಡು ಒತ್ತಾಯಿಸುವ ಮೂಲಕ ಪಾದಯಾತ್ರೆ ಕೈಗೊಳ್ಳುತ್ತಿದ್ದಾರೆ. ಅವರ ತೊಂದರೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇಪ್ಪೊತ್ತು ರೈತರು ರೊಚ್ಚಿಗೆದ್ದರೆ ಏನಾದರೂ ಅನಾಹುತವಾಗುವ ಸಂಭವವಿದೆ. ಆದಕಾರಣ, ಇದರ ಬಗ್ಗೆ ಮಾತನಾಡಲು ನನಗೆ ಸ್ವಲ್ಪ ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯ ಮಹತ್ವದ್ದಲ್ಲವೆಂದು ಹೇಳುವುದಿಲ್ಲ. ನಿಯಮಾವಳಿ ರೀತ್ಯ ನಡೆದುಕೊಂಡು, ನಾವೂ ನೀವೂ ಕುಳಿತು ವಿಷಯವನ್ನು ಚರ್ಚಿಸಿ ಏನಾದರೂ ಪರಿಹಾರ ಕಂಡುಕೊಂಡರೆ ಅದು ಸದುಪಯೋಗವಾಗುತ್ತದೆ. ಇಲ್ಲವೇ ನಿಯಮಾವಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡು ವಿಷಯ ಪ್ರಸ್ತಾಪಿಸಿದರೆ ಸುಮ್ಮನೆ ಕುಳಿತುಕೊಳ್ಳುವಂತಾಗುತ್ತದಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಸದಸ್ಯರಾದ ಗೋವಿಂದ ಕಾರಜೋಳರವರು ತುರ್ತಾಗಿ ಈ ವಿಷಯವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದ ಉದ್ದೇಶವೇನೆಂದರೆ, ಆ ಭಾಗದ ಜಿಲ್ಲೆಗಳಲ್ಲಿ ಸಮಗ್ರ ನೀರಾವರಿ ಯೋಜನೆ ಅನುಷ್ಠಾನ ಕುರಿತಂತೆ ರೈತರಿಂದ ಅಷ್ಟು ದೊಡ್ಡ ಹೋರಾಟ ನಡೆಯುತ್ತಿರಬೇಕಾದರೆ, ಆ ಬಗ್ಗೆ ಸರ್ಕಾರ ಏನಾದರೂ

ಉತ್ತರ ಕೊಡಬೇಕಾಗಿತ್ತು. ಅಲ್ಲಿ ಸತ್ಯಾಗ್ರಹ ಮಾಡುತ್ತಿರುವವರನ್ನು ಕಂಡು ಭೇಟಿ ಮಾಡಬೇಕಾಗಿತ್ತು. ತಾವು ಯಾರಾದರೂ ಅಲ್ಲಿಗೆ ಹೋದಿರಾ? ಅವರುಗಳನ್ನು ಭೇಟಿ ಮಾಡಿದಿರಾ? ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿದಿರಾ?

ಶ್ರೀ ಹೆಚ್.ಕೆ. ಪಾಟೀಲ್ : ಅದನ್ನು ನಿಯಮಾವಳಿ ಪ್ರಕಾರ ಅನುಸರಿಸಲಾಗುತ್ತದೆ. ಸಂಬಂಧಪಟ್ಟ ಸಚಿವರು ಅದಕ್ಕೆ ಉತ್ತರಿಸುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾತನಾಡಲು ಅನುಮತಿ ಕೊಟ್ಟಿದ್ದೀರಾ? ಪ್ರಶ್ನೋತ್ತರ ಇರುವಾಗ ಪ್ರತಿ ದಿವಸವೂ ಈ ರೀತಿ ಪ್ರಸ್ತಾಪಿಸುವುದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ಕಾರಜೋಳರವರೆ, ತಾವು ಈಗ ಪ್ರಸ್ತಾಪಿಸಿರುವ ವಿಷಯವನ್ನು ಸರ್ಕಾರ ಗಮನಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿರುವುದರಿಂದ ಅದರ ಬಗ್ಗೆ ಸೂಕ್ತವಾಗಿ ಉತ್ತರಿಸುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಅದೇ ಆಗಿರುವುದು ಅನಾಹುತ! ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ಕೊಳ್ಳದಿಂದ ಬಂದಿರುವವರಾಗಿದ್ದು, ನೇರವಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್...

ಅಧ್ಯಕ್ಷರು : ತಾವು ಈಗಾಗಲೇ ಈ ವಿಷಯವಾಗಿ ಸರ್ಕಾರದ ಗಮನ ಸೆಳೆದಿರುವುದರಿಂದ ಅವರು ಸೂಕ್ತವಾಗಿ ಉತ್ತರ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ಕುರಿತು "ನಾನು ಅಲ್ಲಿಗೆ ಹೋಗಿ ರೈತರನ್ನು ಸಮಾಧಾನ ಮಾಡುತ್ತೇನೆ. ನೀವು ಪಾದಯಾತ್ರೆ, ಧರಣಿ ಮಾಡಬೇಡಿ, ಆಲಮಟ್ಟಿ ಹಿನ್ನೀರಿನಲ್ಲಿ ಅಲೊಕೇಷನ್ ಆಗಿರುವ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ" ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು.

ಅಧ್ಯಕ್ಷರು : ಈಗ ಆಯಿತಲ್ಲಾ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಅದರ ಬಗ್ಗೆ ಒಂದು ಪ್ರಸ್ತಾವ ಕಳುಹಿಸಿದ್ದೇನೆ. ಅಲ್ಲಿ ರೈತರಿಂದ ಪಾದಯಾತ್ರೆ ನಡೆಯುತ್ತಿದೆ, ಹೋರಾಟ ಜರುಗುತ್ತಿದೆ. ಆ ಕುರಿತಂತೆ ಚರ್ಚಿಸಲು ಅವರಿಗೆ ಅವಕಾಶ ನೀಡಿದ ಬಳಿಕ ನನಗೂ ಸ್ವಲ್ಪ ಅವಕಾಶ ಕಲ್ಪಿಸಿಕೊಡಬೇಕು. ಆ ವಿಷಯದ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಜಗದೀಶ್ ಶೆಟ್ಟರ್‌ರವರ ಮತ್ತು ಮಾನ್ಯ ಕಾರಜೋಳರವರ ನೀರಾವರಿ ಬಗೆಗಿನ ಕಳಕಳಿಯ ಬಗ್ಗೆ ನಾವು ಯಾರೂ ಪ್ರಶ್ನೆ ಮಾಡಿಲ್ಲ. ಆದರೆ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು ಎಂದು ಹೇಳಿದರಲ್ಲಾ ಮುಖ್ಯಮಂತ್ರಿಗಳು ಹೋಗಿ ಯೋಜನಾ ಗಾತ್ರದಲ್ಲಿ ನೀರಾವರಿಗೆ ಎಷ್ಟು ದೊಡ್ಡ ಮೊತ್ತವನ್ನು ತೆಗೆದುಕೊಂಡು ಬಂದರು ಎಂಬುದು ತಮಗೇ ಗೊತ್ತಿದೆ. ಆದ್ದರಿಂದ ತಾವೇ ಪಾದಯಾತ್ರೆ ಬೇಡ ಮತ್ತೊಂದು ಅವಕಾಶದಲ್ಲಿ ಏನಾದರೂ ನೋಡುವಿರಂತೆ, ಇದೊಂದು ಒಳ್ಳೆಯ ಕೆಲಸ ನಡೆದಿದೆಯೆಂದು ಹೇಳಬೇಕಾಗಿತ್ತು ಎಂದು ನಾವು ಭಾವಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಹಿಂದಿನ ನೀರಾವರಿ ಸಚಿವರೂ ಹಾಗೂ ಇಂದಿನ ಕಾನೂನು ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್‌ರವರಲ್ಲಿ ನಾನು ಒಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಇದೇನಿದು? ತಾವು ಇದರ ಬಗ್ಗೆ ಮೆನ್‌ಷನ್ ಮಾತ್ರ ಮಾಡುತ್ತೇನೆಂದು ಹೇಳಿದಿರಿ, ಅದರಂತೆ ಸರ್ಕಾರದ ಗಮನ ಸೆಳೆದಿದ್ದೀರಿ, ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ. ಈ ರೀತಿಯಾದರೆ ಸದನ ನಡೆಸಲು ಸಾಧ್ಯವಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಸದನದ ಕಲಾಪಕ್ಕೆ ಅಡ್ಡಿ ಮಾಡಬೇಕು ಎಂಬ ಉದ್ದೇಶ ನಮಗೆ ಇಲ್ಲ.

ಅಧ್ಯಕ್ಷರು : ಇದು ಕಲಾಪಕ್ಕೆ ಅಡ್ಡಿ ಮಾಡಿದಂತೆಯೇ. ತಾವು ಗಮನ ಸೆಳೆಸಿದ್ದೀರಿ, ಆದ್ದರಿಂದ ದಯಮಾಡಿ ಕುಳಿತುಕೊಳ್ಳಬೇಕು. ಅದಕ್ಕೆ ಸರ್ಕಾರ ಸೂಕ್ತವಾದ ಉತ್ತರವನ್ನು ಕೊಡುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ದಯಮಾಡಿ ಇದಕ್ಕೆ ಸಮಯವನ್ನು ನಿಗದಿ ಮಾಡಿ. ಇವತ್ತು 2000 ಇಸವಿ ಮೇ ಒಳಗಾಗಿ 'ಏ' ಸ್ಕೀಮ್‌ನಲ್ಲಿ ಬರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆದರೆ ಇದುವರೆಗೆ ಮಾಡಿಕೊಳ್ಳಲು ಆಗಿಲ್ಲ. 6 ಲಕ್ಷದ 22 ಸಾವಿರ ಹೆಕ್ಟರ್ ನೀರಾವರಿಯಾಗಬೇಕಾಗಿತ್ತು. ಇದುವರೆಗೆ ಕೇವಲ 4 ಲಕ್ಷದ 65 ಸಾವಿರ ಹೆಕ್ಟರ್ ಮಾತ್ರ ಆಗಿ ಇನ್ನೂ ಒಂದೂವರೆ ಲಕ್ಷ ಹೆಕ್ಟೇರ್ ಭೂಮಿಯ ನೀರಾವರಿಯಾ ೀಕು. ಯಾರು 173 ಹಳ್ಳಿಗಳನ್ನು ಮುಳುಗಿಸಿಕೊಂಡಿದ್ದಾರೆ, ಯಾರು 3 ಲಕ್ಷ 50 ಸಾವಿರ ಹೆಕ್ಟೇರ್ ಭೂಮಿಯನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ಆಗಬೇಕಾದಂಥ ಯೋಜನೆ ಒಂದು ಪರ್‌ಸೆಂಟ್ ಸಹ ಉಪಯೋಗವಾಗಿಲ್ಲ. ಅದರ ಬಗ್ಗೆ ನಿರ್ಲಕ್ಷವಾಗಿದೆ. ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತಲ್ಲಾ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಸಮಯ ಕೊಟ್ಟರೆ ಸಾಕು.

ಅಧ್ಯಕ್ಷರು : ಆಗಲಿ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ರೈತರು ಹತ್ತಿ ಬೆಳೆ ನಾಶವಾಗಿರುವ ಬಗ್ಗೆ ಸುಮಾರು ಹದಿನೈದು ದಿವಸಗಳಿಂದ ಹೋರಾಟವನ್ನು ನಡೆಸಿದ್ದಾರೆ.

ಅಧ್ಯಕ್ಷರು : ಇದೇನಿದು? ಈ ರೀತಿ ಎಲ್ಲಾ ನಿಂತುಕೊಂಡು ಮಾತನಾಡಿದರೆ ಈ ಸದನದ ನಿಯಮಾವಳಿಗಳೇನು?

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಇದು ಜಠಿಲವಾದಂಥ ಸಮಸ್ಯೆಯಾಗಿದೆ. ದಯವಿಟ್ಟು ಇದನ್ನು ಅತ್ಯಂತ...

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರಗಳು.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಎಂದು ಮುದ್ರಿತವಾಗಿದೆ. ಒಳಚರಂಡಿ ಯೋಜನೆ ವಿಚಾರ ಪೌರಾಡಳಿತ ಸಚಿವರಿಗೆ ಸಂಬಂಧಪಡುತ್ತದೆ. ಆದ್ದರಿಂದ ಆ ಸಚಿವರು ಬಂದಾಗ ಉತ್ತರ ಕೊಡಿಸೋಣ.